RNU AIR DHARWAD

NOVEMBER 21, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಇಂದು, ಸಂತ ನಾಮದೇವ ಮಹಾರಾಜರ, ಜಯಂತ್ಯುತ್ಸವ. 'ನಾಮದೇವ ಗಾಥಾ', ತಮ್ಮ ಅಭಂಗಗಳ ಮೂಲಕ, ಸರಳ ಭಾಷೆಯಲ್ಲಿ, ಆಧ್ಯಾತ್ಮಿಕ ಚಿಂತನೆಗಳನ್ನು, ಜನರಿಗೆ ತಲುಪಿಸಿದ, ಜನಾನುರಾಗಿ ಸಂತ ಮಹಾತ್ಮರು. ಭಕ್ತಿ ಮಾರ್ಗದಲ್ಲಿ, ಸಮಾನತೆ, ಕಾಯಕ ಶ್ರದ್ಧೆ, ಮಾನವೀಯತೆ ಮತ್ತು ಸಾಮಾಜಿಕ ಸಾಮರಸ್ಯ ಕಾಪಾಡುವ, ಸಂಕಲ್ಪದ ದಿನವಾಗಿ, ಈ ದಿನ ಆಚರಿಸಲ್ಪಡುತ್ತದೆ.

<><><>

ಭಾರತೀಯ ವಿಜ್ಞಾನದ ಹಿರಿಮೆ, ನೊಬೆಲ್ ಪ್ರಶಸ್ತಿ ಪುರಸ್ಕೃತ, ಸರ್ ಸಿ.ವಿ. ರಾಮನ್ ಅವರ, ಪುಣ್ಯ ಸ್ಮರಣೆ ದಿನವಾದ ಇಂದು, ಶ್ರದ್ಧಾ ಸುಮನ ಸಮರ್ಪಿಸಲಾಗುತ್ತಿದೆ.

<><><>

ಕನ್ನಡದ ಅಪೂರ್ವ ಲೇಖಕಿ, ಭಾರತಿ ಕಾವ್ಯನಾಮದ, ತಿರುಮಲೆ ರಾಜಮ್ಮ ಅವರ, ಜನ್ಮ ದಿನವಿಂದು.

<><><>

ಇಂದು, ನಾಡಿನಾದ್ಯಂತ, ತುಳಸಿ ವಿವಾಹದ ಸಂಭ್ರಮ ಮನೆ ಮಾಡಿದೆ. ಪೇಟೆಗಳಲ್ಲಿ ನಿನ್ನೆ ಕಬ್ಬು, ಜೋಳದ ದಂಟು, ಬಾಳೆ ಕಂದು, ತಳಿರು–ತೋರಣ, ಹೂವು, ಹಣ್ಣುಗಳ ಖರೀದಿ ಜೋರಾಗಿತ್ತು. ಕಾರ್ತಿಕ ಮಾಸದ, ಶುಕ್ಲ ಪಕ್ಷದ ದ್ವಾದಶಿ ಅಥವಾ ಕೆಲ ಸಂಪ್ರದಾಯಗಳಲ್ಲಿ, ತ್ರಯೋದಶಿ ಹಾಗೂ ಪೂರ್ಣಿಮೆಯಂದು, ತುಳಸಿ ವಿವಾಹ, ಶ್ರದ್ಧಾ–ಭಕ್ತಿಯಿಂದ ಆಚರಿಸಲಾಗುತ್ತದೆ.

<><><>

ಸ್ವಚ್ಛತೆಯೇ ಸೇವೆ, ಸ್ವಚ್ಛ ಭಾರತ ಅಭಿಯಾನ ಹಾಗೂ ನೈರ್ಮಲ್ಯ ಸಪ್ತಾಹದ ಅಂಗವಾಗಿ, ಹುಬ್ಬಳ್ಳಿ, ಧಾರವಾಡ ಮಹಾನಗರ ಪಾಲಿಕೆ ಹಾಗೂ ಟ್ರಾನ್ಸ್‌ಫಾರ್ಮಿಂಗ್ ಧಾರವಾಡ, ಜನ ಸಹಭಾಗಿತ್ವದಲ್ಲಿ, ಶ್ರಮದಾನ ಮತ್ತು ಸ್ವಚ್ಛತಾ ಅಭಿಯಾನ ಆಯೋಜಿಸಿವೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟ, ಧಾರವಾಡದ ಅನಿರುದ್ಧ ಜತ್ಕರ, ನಾಳೆ ಬೆಳಗ್ಗೆ ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಅವಳಿ ನಗರದ ಜನತೆ, ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸುವಂತೆ, ನಟ ಅನಿರುದ್ಧ ಮನವಿ ಮಾಡಿದ್ದಾರೆ.

<><><>

ಅನಿರುದ್ಧ ಜತ್ಕರ ಧ್ವನಿ 35 ಸೆಕೆಂದುಗಳು

<><><>

ಮಂಡ್ಯ ಜಿಲ್ಲೆಯ ರೈತರಿಗೆ, ದೀರ್ಘಾವಧಿ ಆರ್ಥಿಕ ಲಾಭ ಕಲ್ಪಿಸಲು, ತೇಗಸಿರಿ ಯೋಜನೆಯಡಿ, 10 ಲಕ್ಷ ಸಸಿಗಳನ್ನು ನೆಡಲಾಗುವುದು ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ, ತಿಳಿಸಿದ್ದಾರೆ.

<><><>

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, cmdashboard.karnataka.gov.in ಜಾಲತಾಣವನ್ನು, ಬೆಂಗಳೂರಿನಲ್ಲಿ ಲೋಕಾರ್ಪಣೆಗೊಳಿಸಿದರು. ಸಾರ್ವಜನಿಕ ಕಾಮಗಾರಿಗಳು, ನಾಗರಿಕ ಸೇವೆಗಳು, ದೂರುಗಳ ಪರಿಹಾರ ಹಾಗೂ ಸರ್ಕಾರಿ ನೌಕರರ ಹಾಜರಾತಿಯ ಮಾಹಿತಿಯನ್ನು, ಒಂದೇ ವೇದಿಕೆಯಲ್ಲಿ ವೀಕ್ಷಿಸಬಹುದು ಎಂದು, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ದಕ್ಷಿಣಕನ್ನಡ ಜಿಲ್ಲೆಯ, 14 ರಕ್ತನಿಧಿ ಕೇಂದ್ರಗಳಲ್ಲಿ, 25ನೇ ತಾರೀಖು, ರಾಷ್ಟ್ರೀಯ ಸ್ವಯಂಪ್ರೇರಿತ, ರಕ್ತದಾನ ದಿನಾಚರಣೆ ಹಾಗೂ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಎಚ್.ಆರ್. ತಿಮ್ಮಯ್ಯ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, 'ಮಾನವೀಯತೆಯ ಒಂದು ಹನಿ ರಕ್ತ, ಜೀವ ಉಳಿಸಬಲ್ಲುದು' ಎಂಬ ಧ್ಯೇಯದೊಂದಿಗೆ, 2 ಸಾವಿರ ಯೂನಿಟ್ ರಕ್ತ ಸಂಗ್ರಹಿಸುವ ಗುರಿ ಹೊಂದಲಾಗಿದೆ, ಎಂದರು.

<><><>

ಆಕಾಶವಾಣಿ 90: ವಾರ್ಷಿಕೋತ್ಸವದ ಹಿನ್ನೆಲೆ, 30 ವ ರ್ಷದೊಳಗಿನ ಯುವ ಕಲಾವಿದರಿಗೆ, 'ಎ.ಐ.ಆರ್. ರೈಸಿಂಗ್ ಸ್ಟಾರ್ಸ್' ಎಂಬ, ರಾಷ್ಟ್ರವ್ಯಾಪಿ ವಿಶೇ ಷ ಸಂಗೀತ ಕಛೇರಿಗಳ, ಮೊದಲ ಸರಣಿ ಮೂಲಕ, 30ನೇ ತಾರೀಖಿನ ವರೆಗೆ, ದೇಶದ 26 ವಿವಿಧ ಸ್ಥಳಗಳಲ್ಲಿ, ಪ್ರತಿಭಾ ಪ್ರದರ್ಶನಕ್ಕೆ, ಅವಕಾಶ ಕಲ್ಪಿಸಿದೆ.

<><><>

ಆಕಾಶವಾಣಿ ಧಾರವಾಡ ಕೇಂದ್ರ, ಬುಧವಾರ 25ನೇ ತಾರೀಖು, ಸಂಜೆ 6 ಗಂಟೆಗೆ, ಆಲೂರು ವೆಂಕಟರಾವ ಸಭಾಭವನದಲ್ಲಿ ಆಯೋಜಿಸಿದ, 'ಎ.ಐ.ಆರ್. ರೈಸಿಂಗ್ ಸ್ಟಾರ್ಸ್' ಕಾರ್ಯಕ್ರಮದಲ್ಲಿ, ಖ್ಯಾತ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕ, ಪದ್ಮಶ್ರೀ ಪುರಸ್ಕೃತ, ಪಂಡಿತ ಎಂ. ವೆಂಕಟೇಶಕುಮಾರ, ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

<><><>

ಸಾಹಿತ್ಯವೆಂದರೆ ಮನು ಷ್ಯನ ಬದುಕಿನ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಎಂದು, ಸಾಹಿತಿ ಬಾನು ಮಷ್ತಾಕ್ ಅಭಿಪ್ರಾಯಪಟ್ಟಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ, ಸುವರ್ಣ ಮಹೋತ್ಸವ ಸಭಾ ಭವನದಲ್ಲಿ, ಅರಿವೇ ಗುರು ಪ್ರಶಸ್ತಿ ಸ್ವೀಕರಿಸಿ, ಅವರು ಮಾತನಾಡಿದರು. ಕುಲಪತಿ, ಡಾಕ್ಟರ್ ಎ.ಎಂ. ಖಾನ್, ಕೀರ್ತಿಶೇಷ ಎಸ್. ನಿಜಲಿಂಗಪ್ಪ ಅವರ ಸುಪುತ್ರ, ಖ್ಯಾತ ಭೌತಶಾಸ್ತ್ರ ಅಧ್ಯಾಪಕ, 95 ವರ್ಷ ವಯಸ್ಸಿನ, ಪ್ರೊಫೆಸರ್ ಎಸ್.ಎನ್. ಉಮಾಪತಿ ಸೇರಿದಂತೆ, ವಿವಿಧ ಕ್ಷೇತ್ರಗಳ ಗಣ್ಯರಿಗೆ, 2025–26ನೇ ಸಾಲಿನ 'ಅರಿವೆ ಗುರು' ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಿದರು.

<><><>

5ನೇ ಕರ್ನಾಟಕ ಮಿನಿ ಒಲಿಂಪಿಕ್ಸ್ ಕ್ರೀಡಾಕೂಟದ ಸಮಾರೋಪ, ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ, ಇಂದು ಸಂಜೆ 5 ಗಂಟೆಗೆ, ನಡೆಯಲಿದೆ. ಕ್ರೀಡಾ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.